ಬರಲಿ ಎಂದೇ ಹೇಳುತ್ತೇನೆ.

ಮಗನ ಸಪ್ಪೆ ಮುಖ ಮತ್ತು ಉದಾಸ ಕಣ್ಣುಗಳನ್ನು ನೋಡುತ್ತಾ ಹೌದು ಆ ಮೊದಲನೇ ತಾರೀಖು ಎಂದೂ ಬರುವುದೇ ಇಲ್ಲ ಎಂದೆನಿಸಿ ಖಿನ್ನನಾಗಿ ಕಾರ್ಖಾನೆಗೆ ಹೊರಡುತ್ತಾನೆ.

ಅಂದು ಐದತ್ತು ನಿಮಿಷ ತಡವಾಗಿ ಕಾರ್ಖಾನೆ ತಲುಪಿದ್ದರಿಂದ ಮಾಲೀಕನ ಕಡೆ ಹೋಗದೇ ನೇರವಾಗಿ ತನ್ನ ಟೇಬಲಿನ ಕಡೆ ಹೋಗುತ್ತಾನೆ. ಟೇಬಲಿನ ಮೇಲೆ ಪೇಮೆಂಟ್ ಶೀಟ್‌ನ ರಾಶಿ ಬಿದ್ದಿರುವುದನ್ನು ನೋಡಿ ಕೆಲಸ ಮಾಡಲು ಮುಂದಾದರೂ ಅಂದೇಕೊ ಅವನಿಗೆ ಕೆಲಸದ ಮೇಲೆ ಮನಸ್ಸೇ ಇರುವುದಿಲ್ಲ. ಪೇ ಶೀಟ್ ಮೇಲೆ ರೈಟ್ ಮಾರ್ಕ್ ಮಾಡುತ್ತಾ ಇರಬೇಕಾದರೆ ಅಚಾನಕ್ ಆಗಿ ಅವನಿಗೆ ಒಬ್ಬನ ಪೇ ಶೀಟ್‌ನಲ್ಲಿ ತುಟ್ಟಿ ಭತ್ಯೆಯ ಇಪ್ಪತ್ತು ರೂಪಾಯಿ ಹೆಚ್ಚಿಗೆ ಹಚ್ಚಿದ್ದು ಕಂಡು ಅವನ ಅಂತಿಮ ಶಿಲ್ಕು ನೋಡಿತ್ತಾನೆ. ಅದು ಇದು ಎಂದು ಕಟ್ ಮಾಡಿ ಆ ಕಾರ್ಮಿಕನಿಗೆ ಆ ತಿಂಗಳು ಕೇವಲ ಎರಡುನೂರಾ ಐವತ್ತು ರೂಪಾಯಿ ಮಾತ್ರ ಪಗಾರ ಸಿಕ್ಕಿದೆ. ಅದನ್ನು ನೋಡಿ ಕಸಿವಿಸಿಗೊಳ್ಳುತ್ತಾ ಭಗವಂತನೇ ಇವನನ್ನು ಕಾಪಾಡಬೇಕು ಎಂದು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಾನೆ. ಮಕ್ಕಳಿದ್ದರಂತೂ ಮುಗಿದೇ ಹೋಯಿತು; ಅವು ಸಾಯುವುದೊಂದೇ ಬಾಕಿ. ಅವನಿಗೆ ಹೆಚ್ಚಿಗೆ ಹಚ್ಚಿದ ಆ ಇಪ್ಪತ್ತು ರೂಪಾಯಿ ಕಟ್ ಮಾಡಲು ಮನಸ್ಸಾಗದೇ ರೈಟ್ ಮಾರ್ಕ್ ಹಾಕಿ ಕಟ್ ಮಾಡದೇ ಮುಂದೆ ಹೋಗುತ್ತಾನೆ.

ಒಮ್ಮೇಲೆ ಅವನಿಗೆ ಹೆಂಡತಿ ಹೇಳಿದ ಇಪ್ಪತ್ತು ರೂಪಾಯಿಗಳ ವಿಚಾರ ನೆನಪಿಗೆ ಬರುತ್ತದೆ. ಯಾರ ಕಡೆ ಕೇಳುವುದು? ಕಂಪನಿಯ ಎಲ್ಲ ಮುಖಗಳನ್ನು ಒಂದೊಂದಾಗಿ ನೆನಪಿಸಿಕೊಳ್ಳುತ್ತಾ ಹೋದರೂ... ಎಲ್ಲರೂ ನನ್ನ ಹಾಗೆ ಖಾಲಿ ಜೇಬಿನವರೆ. ಕೇಳಿದರೆ ಯಾರಾದ್ರೂ ಅವಮಾನ ಮಾಡಿದರಂತೂ ಮನಸ್ಸಿಗೆ ಇನ್ನೂ ಕೆಟ್ಟದು ಎನ್ನಿಸಬಹುದೆಂದು ಆ ವಿಚಾರವನ್ನು ಅಲ್ಲಿಯೇ ಬಿಟ್ಟು ಬಿಡುತ್ತಾನೆ.

ಕತ್ತರಿಯ ಹಾಗೆ ಒಂದೇ ಸಮನೆ ಚಲಿಸುವ ಬಾಯಿಯ ಕುಲಕರ್ಣಿ ಇಂದೇಕೋ ಸುಮ್ಮನೆ ಕುಳಿತಿರುವುದನ್ನು ನೋಡಿ ಅವನಿಗೆ ಆಶ್ಚರ್ಯವಾಗುತ್ತದೆ. ಯಾವಾಗಲೂ ಕಳೆದು ಹೋದ ದಿನಗಳನ್ನೆ ನೆನಪಿಸಿಕೊಳ್ಳುವ ಕುಲಕರ್ಣಿ ಯಾವಾಗ ನೋಡಿದರೂ ಬ್ರಿಟಿಷರ ಕಾಲವೇ ಚಂದವೆಂದು ಹೇಳುತ್ತಾನೆ. ವಯಸ್ಸಾಗಿರುವ ಕುಲಕರ್ಣಿ ನಮ್ಮ ಕಾಲದಲ್ಲಿ ಬಂಗಾರ ಎಂಟು ರೂಪಾಯಿ ತೊಲೆ ಮತ್ತು ಆಕಳ ಅಸಲಿ ತುಪ್ಪ ಸವಾ ರೂಪಾಯಿ ಕಿಲೋ ಇತ್ತು ಎಂದು ಹೇಳುವುದು ದಂತಕತೆಯಂತೆ ಇರುತ್ತದೆ. ಅವನಾಡುವ ಮಾತುಗಳಿಗೂ ನಮ್ಮ ಜೀವನಕ್ಕೂ ತಾಳಮೇಳ ಆಗುವುದೇ ಇಲ್ಲ. ಅವನು ಮತ್ತೆ ಕುಲಕರ್ಣಿ ಕಡೆ ನೋಡಿ, ಯಾಕೋ ಕುಲಕರ್ಣಿ ಸ್ವಲ್ಪ ಹೆಚ್ಚೇ ಚಿಂತಿತನ ಹಾಗೆ ಕಂಡು ಬರುತ್ತಿದ್ದಾನೆ ಎನ್ನಿಸಿ ಬಹುಶಃ ಅವನು ಇಬ್ಬರು ಹೆಣ್ಣು ಮಕ್ಕಳ ಮದುವೆಯ ವರದಕ್ಷಿಣೆಯದ್ದೇ ಚಿಂತೆ ಮಾಡುತ್ತಿರಬೇಕೆಂದುಕೊಳ್ಳುತ್ತಾನೆ.

“ಸಾಹೇಬ್ರೆ!... ನಿಮಗೆ ಫೋನ್ ಬಂದಿದೆ!...” ಎಂದು ಪ್ಯೂನ್ ಬಂದು ಹೇಳಿದ ತಕ್ಷಣ ಈತ ಕುಲಕರ್ಣಿಯ ವಿಷಯದಿಂದ ಹೊರ ಬರುತ್ತಾನೆ. ಬೆಳಗ್ಗೆ ಬೆಳಗ್ಗೆ ಯಾರು ಮಾಡಿರಬೇಕು? ಎನ್ನುತ್ತಾ ದೊಡ್ಡ ಮಾಲೀಕನ ಕ್ಯಾಬಿನನಲ್ಲಿರುವ ಫೋನ್ ತೆಗೆದುಕೊಳ್ಳಲು ಹೋಗುತ್ತಾನೆ. ಮಾಲೀಕ ಸಂಶಯದಿಂದ ನೋಡಿತ್ತಿರುವಾಗಲೇ ಆ ಕಡೆಯಿಂದ ನಗುತ್ತಿರುವ ಶಿಂಧೆ ಜೋರು ಧ್ವನಿಯಲ್ಲಿ ಸಂಜೆ ಎಂಎಲ್‌ಎ ಅವರ ಮನೆ ಕಡೆ ಬರಲು ಹೇಳಿ ಫೋನ್ ಇಡುತ್ತಾನೆ. ಫೋನ್ ಇಟ್ಟು ಬರುವಾಗ ಮಾಲೀಕರಿಗೆ ಧನ್ಯವಾದ ಹೇಳುವುದನ್ನು ಮರೆಯುವುದಿಲ್ಲ. ಧನ್ಯವಾದ ಹೇಳದೇ ಹೋದರೆ ಮುಂದೆ ಯಾವುದಾದರೂ ಫೋನ್ ಬಂದರೆ ಅವನು ಕೊಡುವುದೇ ಇಲ್ಲ.

ಶಿಂಧೆಯ ಬಗ್ಗೆಯೇ ವಿಚಾರ ಮಾಡುತ್ತಾ, ಈ ಬಾರಿಯೂ ಶಿಂಧೆ ಮಜಾ ಮಾಡಲೆಂದೇ